
ಇನ್ನೂ ಮುಂದುವರೆದು ಇಡೀ ದಕ್ಷಿಣ ಏಷ್ಯಾದ ಎಲ್ಲ ಭಾಷೆಗಳಲ್ಲಿರುವ ಅನುಭಾವಿ ಕಾವ್ಯದಲ್ಲಿ ಈ ರೂಪಕದ ಬಳಕೆಯಿದೆಯೆಂದು ತನ್ವೀರ್ ಮಂಡಿಸುತ್ತಾರೆ.

ಅಮೀರ್ ಖುಸ್ರೋ, ಸಯ್ಯದ್ ಮರ್ತೂಜ, ದಾದೂ ದಯಾಳ್, ಸುಲ್ತಾನ್ ಬಹು, ಉಜ಼ೀರ್ ಬೇಗ್, ನಜ಼ೀರ್ ಅಕ್ಬರಾಬಾದಿ, ಇತ್ಯಾದಿ ಅನೇಕ ಮುಸ್ಲಿಮ್ ಸಂತಕವಿಗಳು ಮಧುರ ಭಕ್ತಿಯನ್ನು ಆಚರಿಸುತ್ತಿದ್ದರು. ಇಂತಹ ಮಧುರ ಭಕ್ತಿಯ ಮಧ್ಯಕಾಲೀನ ಮುಸ್ಲಿಮ್ ಸಂತಕವಿಗಳಲ್ಲಿ ಈ ಭಾಗದಲ್ಲಿ ನಾನು ಇಬ್ಬರು ಪ್ರಸಿದ್ಧ ಸಂತಕವಿಗಳನ್ನು ಪರಿಚಯಿಸಿದ್ದೇನೆ - ಅಮೀರ್ ಖುಸ್ರೋ ಮತ್ತು ಸುಲ್ತಾನ್ ಬಹು.

## ಅಮೀರ್ ಖುಸ್ರೋ (1253-1325)



ಸುಲ್ತಾನ್ ಬಲ್ಬನ್‌ನಿಂದ ಸುಲ್ತಾನ್ ಮೊಹಮ್ಮದ್ ಬಿನ್ ತುಘಲಕ್‌ವರೆಗೆ ದೆಹಲಿಯನ್ನಾಳಿದ ಐದು ಸುಲ್ತಾನರ ಹಾಗೂ ಮೂವರು ಯುವರಾಜರ ಆಶ್ರಯವನ್ನು ಪಡೆದಿದ್ದ, ಆಸ್ಥಾನಕವಿ ಹಾಗೂ ಸೂಫಿ ಸಂತ, ಸಂಗೀತಜ್ಞ-ಕವಿ-ವಿದ್ವಾಂಸ ಅಬುಲ್ ಹಸನ್ ಯಾಮಿನ್ ಅಲ್-ದೀನ್ ಖುಸ್ರೋ ಅಥವಾ ಅಮೀರ್ ಖುಸ್ರೋ ಅರೇಬಿಕ್ ಮತ್ತು ಪರ್ಷಿಯನ್ ಕಾವ್ಯ, ಸಂಗೀತ, ಆಧ್ಯಾತ್ಮಿಕ ಚಿಂತನೆಯ ಪರಂಪರೆಗಳನ್ನು ಬೆಸೆದ ಮಧ್ಯಕಾಲೀನ ಭಾರತೀಯ ಸಂಶ್ಲೇಷಣಾತ್ಮಕ ಸಂಸ್ಕೃತಿಯ (ಅವನ ಮಾತಿನಲ್ಲಿಯೇ ಹೇಳುವುದಾದರೆ 'ಗಂಗಾ-ಜಮ್ನಿ ಸಂಸ್ಕೃತಿ') 'ಮಾದರಿ' ವ್ಯಕ್ತಿ. ಇವನ ಹುಟ್ಟಿನಲ್ಲಿಯೇ ಭಿನ್ನ ಸಂಸ್ಕೃತಿಗಳ ಬೆಸುಗೆಯಿತ್ತು: ಇವನ ತಂದೆ, ಅಮೀರ್ ಸೈಫ್ ಉದ್-ದೀನ್ ಶಂಸಿ ಮಂಗೋಲರ ದಾಳಿ-ಹಾವಳಿಯನ್ನು ತಡೆಯಲಾಗದೆ ಮಧ್ಯ ಏಷ್ಯಾದಿಂದ ಉತ್ತರ ಭಾರತಕ್ಕೆ ವಲಸೆ ಬಂದ ಟರ್ಕಿಶ್ ಯೋಧರಲ್ಲಿ ಒಬ್ಬ; ಅವನು ಮದುವೆಯಾದುದು ದೆಹಲಿಯಲ್ಲಿಯೇ ಹುಟ್ಟಿ ಬೆಳೆದ ಮುಸ್ಲಿಮ್ ಯುವತಿಯನ್ನು; ಇವರಿಬ್ಬರ ಮಕ್ಕಳಲ್ಲಿ ಮೂರನೆಯ ಮಗನೇ ಅಮೀರ್ ಖುಸ್ರೋ. ಖುಸ್ರೋನ ಪತ್ನಿಯ ಹೆಸರು ಅಜ್ಞಾತವಾಗಿಯೇ ಉಳಿದಿದೆ; ಆದರೆ, ತನ್ನ ಅನೇಕ ಬರಹಗಳಲ್ಲಿ ಖುಸ್ರೋ ತನ್ನ ಮಕ್ಕಳ ಬಗ್ಗೆ ಹಾಗೂ ತನ್ನ ಒಡಹುಟ್ಟಿದವರ ಬಗ್ಗೆ ಅಲ್ಲಲ್ಲಿ ಬರೆದಿದ್ದಾನೆ.

ಖುಸ್ರೋ ಎಂಟು ವರ್ಷದವನಾಗಿದ್ದಾಗಲೇ ಅವನ ತಂದೆ ದೆಹಲಿ ಸುಲ್ತಾನನ ಪರವಾಗಿ ಯುದ್ಧವೊಂದರಲ್ಲಿ ಹೋರಾಡುತ್ತಾ ಮರಣಹೊಂದಿದನು; ಅಂದಿನಿಂದ ಖುಸ್ರೋ ಬೆಳೆದುದು ಅವನ ಅಜ್ಜನ (ಎಂದರೆ ತಾಯಿಯ ತಂದೆಯ) ಮನೆಯಲ್ಲಿ. ಅವನ ಅಜ್ಜ ದೆಹಲಿಯ ಗೌರವಾನ್ವಿತ ವ್ಯಕ್ತಿಗಳಲ್ಲಿ ಒಬ್ಬನಾಗಿದ್ದು ಅನೇಕ ದಶಕಗಳ ಕಾಲ ಸುಲ್ತಾನನ ಆಸ್ಥಾನದಲ್ಲಿದ್ದನು. ಅಜ್ಜನ ಮನೆಯಲ್ಲಿದ್ದಾಗಲೇ ಖುಸ್ರೋ ಆಗ ಸಣ್ಣ ವಯಸ್ಸಿನ ನಿಜ಼ಾಮುದ್ದೀನ್ ಔಲಿಯಾನನ್ನು ಮೊದಲ ಬಾರಿಗೆ ಭೇಟಿ ಮಾಡಿದ್ದು; ಆಗತಾನೇ ಔಲಿಯಾ ಪ್ರೌಢ ಶಿಕ್ಷಣಕ್ಕಾಗಿ ದೆಹಲಿಗೆ ಬಂದಿದ್ದನು. ಮುಂದೆ, ಖುಸ್ರೋ ಮತ್ತಿ ಔಲಿಯಾ ನಡುವೆ ಗಾಢ ಸಂಬಂಧ ಬೆಳೆಯಿತು. ಔಲಿಯಾ ಚಿಶ್ತಿ ಪಂಥದ ಸೂಫಿ ಸಂತನಾಗಿ ದೆಹಲಿಯಲ್ಲಿ ಅತ್ಯಂತ ಪ್ರಭಾವಿ ವ್ಯಕ್ತಿಯಾದನು. ಖುಸ್ರೋ ಕೂಡಾ ಅವನ ಪ್ರಭಾವಲಯದಲ್ಲಿ ಒಬ್ಬನಾಗಿ, ಔಲಿಯಾನನ್ನು ತನ್ನ ಗುರು ಎಂದು ಪರಿಗಣಿಸಿದನು, ಮತ್ತು ಅನೇಕ ಆಪ್ತ ಕವನಗಳನ್ನು ಅವರಿಬ್ಬರ ನಡುವಿನ ಸಂಬಂಧದ ಬಗ್ಗೆ ರಚಿಸಿದನು.

ಅಜ್ಜನ ಮನೆಯಲ್ಲಿದ್ದುಕೊಂಡೇ ಖುಸ್ರೋ ಅಂದಿನ ಪ್ರಭಾವಿ ಭಾಷೆಗಳಾದ ಅರೇಬಿಕ್ ಮತ್ತು ಪರ್ಷಿಯನ್ ಭಾಷೆ-ಸಾಹಿತ್ಯಗಳಲ್ಲಿ ಪ್ರೌಢಿಮೆಯನ್ನು ಪಡೆದನು; ಹಾಗೆಯೇ ಅಂದು ಜನಸಾಮಾನ್ಯರ ಭಾಷೆಯಾದ ಹಿಂದವಿಯ (ಹಿಂದಿಯ ಮೂಲ ರೂಪವಾದ 'ಖಡಿಬೋಲಿ') ಪರಿಚಯವೂ ಅವನಿಗಾಯಿತು. ಖುಸ್ರೋ ತನ್ನ 20ನೆಯ ವಯಸ್ಸಿನಲ್ಲಿಯೇ ಪರ್ಷಿಯನ್ ಭಾಷೆಯಲ್ಲಿ ಕವನಗಳನ್ನು ರಚಿಸಲು ಪ್ರಾರಂಭಿಸಿ ಕಾವ್ಯರಸಿಕರ ಮೆಚ್ಚುಗೆಗೆ ಪಾತ್ರನಾದನು. ಅನಂತರ